

‘ಫೋನ್ ಮಾಡಿ?!’

‘ನಿಮ್ಮ ರತ್ನತ್ತೆ ಹೇಗಿದ್ದಾರೆ ಅಂತ ಕೇಳಿ. ಅಲ್ಲೇ ಇದ್ದರೆ ಫೋನ್ ಅವರಿಗೆ ಕೊಡು ಅಂತ ಹೇಳಿ... ಮಾತಾಡಿ ಅವರ ಜೊತೆ...’

‘ನನ್ನ ಹತ್ತಿರ ಸುನೀತಾ ಫೋನ್ ನಂಬರ್ ಇಲ್ಲ...’ ಮೆಲ್ಲನೆ ಹೇಳಿದೆ.

‘ಏನತ್ತೆ ನೀವು? ನಿಮ್ಮ ಫಸ್ಟ್ ಕಸಿನ್ ಫೋನ್ ನಂಬರ್ ಇಲ್ಲವೇ ನಿಮ್ಮ ಬಳಿ? ವಿವೇಕ್, ನಾನು ನೋಡಿದ್ದು ಇವರನ್ನೇ... ಸಣ್ಣ ಆಗಿದ್ದಾರೆ. ಆ ಗತ್ತು ಇಲ್ಲ. ಆದರೆ ಇವರೇ ಅಲ್ಲಿ ಇದ್ದದ್ದು. ನನ್ನ ಗುರುತು ಸಿಕ್ಕಿತು ಅವರಿಗೆ. ಅದಕ್ಕೆ ಒಳಗೆ ಹೋದವರು ಹೊರಬರಲೇ ಇಲ್ಲ...’

ಏರು ದನಿಯಲ್ಲಿ ಸೌಮ್ಯ ಹೇಳುತ್ತಾ ಹೋದಳು. ನಾನು ಸುಮ್ಮನೆ ಕುಳಿತೆ.

ಅಮ್ಮನ ಹಿರಿಯಣ್ಣ, ಸೋದರ ಮಾವನದು ಹೆಂಗರುಳು. ಆದರೆ ರತ್ನತ್ತೆ ಮೊದಲಿನಿಂದಲೂ ಜೋರೇ... ನಾವು ಚಿಕ್ಕವರಿದ್ದಾಗ ಅವರನ್ನು ಕಂಡರೆ ಹೆದರುತಿದ್ವಿ. ಅಷ್ಟೇನು ಶ್ರೀಮಂತರಲ್ಲದ ನಮ್ಮ ಅಮ್ಮನ್ನ ಕಂಡರೆ ರತ್ನತ್ತೆಗೆ ಅಷ್ಟಕಷ್ಟೇ. ಇನ್ನು ನನ್ನ ಕಂಡರೂ ಅಷ್ಟೇ. ದುಡ್ಡು ಕಾಸಿನಲ್ಲಿ ಅವರ ಸಮಕ್ಕೆ ಇಲ್ಲದವರನ್ನು ಕಂಡರೆ ರತ್ನತ್ತೆಗೆ ಅಸಡ್ಡೆ. ಆದರೆ ನನ್ನ ಅಮ್ಮನಿಗೆ ಅವಳ ತೌರಿನ ಮೋಹ. ಅಣ್ಣನ ಮೇಲೆ ಇನ್ನಿಲ್ಲದಷ್ಟು ಪ್ರೀತಿ. ಹೂ ವೀಳ್ಯಕ್ಕೆ ಅತ್ತಿಗೇನ ಕರೀ, ಹಿರಿ ಮುತ್ತೈದೆ... ಅವರನ್ನು ಮುಂದಾಗಿ ಕೂರಿಸು... ಎಂದೆಲ್ಲಾ ತಾಕೀತು. ಅಮೆರಿಕದಲ್ಲಿ ಇರುವ ಅವರ ಮಗಳು ಸುನೀತಾ ನನ್ನ ಓರಗೆಯವಳು. ತಾಯಿಯದೇ ಪಡಿಯಚ್ಚು. ಅದೇ ಬುದ್ಧಿ.

ವಿವೇಕನ ಮದುವೆಗೆ ಬಂದಿದ್ದಳು. ಎರಡು ದಿನದ ಮದುವೆಗೆ ಎಂಟು ಬಾರಿ ಸೀರೆ ಬದಲಿಸಿದಳು. ಅತೀ ನಾಟಕೀಯತೆ. ಮಾತು ಮಾತಿಗೂ ಹುಚ್ಚು ನಗು... ಆದರೆ ಅವೆಲ್ಲಾ ನನ್ನ